# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಬಿ.ಆರ್. ನೀಲಕಂಠ | | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ ಶ್ರೀ ದೊಡ್ಡ ರುದ್ರಪ್ಪ | | **19.04.2022** |
| ವಯಸ್ಸು | ಃ 59 ವರ್ಷ | | |
| ವೃತ್ತಿ | ಃ ಪ್ರಾಂಶುಪಾಲರು, ಮರಿಮಲ್ಲಪ್ಪ ಪಿ.ಯು ಕಾಲೇಜು, ಮೈಸೂರು | ಪ್ರಾ.ಸಾ. ಃ | 21 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ | 37 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕಳೆದ *6* ವರ್ಷಗಳಿಂದ ಮರಿಮಲ್ಲಪ್ಪ ಪಿ.ಯು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದೇನೆ. ನಿ.ಪಿ.*-89* ರಲ್ಲಿ ನಿ.ಪಿ.*-89(ಬಿ)* ನನ್ನ ಸಹಿ ಇದೆ. ದಿಃ*28.12.2016* ರಂದು ಮಧ್ಯಾಹ್ನ *3.00* ರಿಂದ *4.00* ರ ವೇಳೆಗೆ ವಿ.ವಿ.ಪುರಂ ಪೊಲೀಸ್ ಠಾಣೆ ತನಿಖಾಧಿಕಾರಿ ಮತ್ತು ಸಿಬ್ಬಂದಿಗಳು *4* ಜನರೊಂದಿಗೆ ಕಾಲೇಜಿಗೆ ಭೇಟಿ ನೀಡಿ ಸಂಜು ಅಲಿಯಾಸ್ ಸ್ಯಾಮ್ಸನ್ ವಿದ್ಯಾರ್ಥಿ ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ವಿಚಾರಣೆ ಮಾಡಿದ್ದರು. ಸದರಿ ವಿದ್ಯಾರ್ಥಿ ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುವಂತೆ ಹೇಳಿದ್ದರು. *2003-2004* ನೇ ಸಾಲಿನಲ್ಲಿ ಸಂಜು ಅಲಿಯಾಸ್ ಸ್ಯಾಮ್ಸನ್ ನಮ್ಮ ಕಾಲೇಜಿನಲ್ಲಿ ಜೆಒಸಿ ಎಲೆಕ್ಟ್ರಿಕಲ್ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ದಾಖಲೆಗಳನ್ನು ಹಾಜರು ಮಾಡುವ ಮೊದಲು ನಾನು ತನಿಖಾಧಿಕಾರಿಗೆ ಲಿಖಿತವಾಗಿ ದಾಖಲೆಗಳನ್ನು ಹಾಜರು ಪಡಿಸುವ ಬಗ್ಗೆ ಕೇಳಿದ್ದೇನೆ. ಅದೇ ವೇಳೆ ತನಿಖಾಧಿಕಾರಿ ಸದರಿ ವಿದ್ಯಾರ್ಥಿ ಇತರೆ *4* ಜನರ ಜೊತೆ ಸೇರಿಕೊಂಡು ಕೊಲೆ ಪ್ರಕರಣದಲ್ಲಿ ಭಾಗಿ ಆಗಿರುವುದಾಗಿ ಮತ್ತು ಆ ಸಂಬಂದ ದಾಖಲೆಗಳನ್ನು ಒದಗಿಸುವಂತೆ ಲಿಖಿತವಾಗಿ ಕೇಳಿದ್ದರು. ನನಗೆ ಈಗ ತೋರಿಸಿದಂತೆ ನಿ.ಪಿ.*-88* ರಂತೆ ನಾನು

ದಾಖಲೆಯನ್ನು ಹಾಜರು ಮಾಡಿದ್ದೇನೆ ಮತ್ತು ಸದರಿ ದಾಖಲೆಯನ್ನು ಗುರುತಿಸಿದ್ದೇನೆ. ನಿ.ಪಿ.-*88* ಅನ್ನು ವಶಕ್ಕೆ ಪಡೆದ ಬಗ್ಗೆ ನಿ.ಪಿ.-*89* ದಾಖಲೆಯಲ್ಲಿ ನಾನು ಸಹಿ ಮಾಡಿದ್ದೇನೆ. ಅಂದು ನಮ್ಮ ಕಾಲೇಜಿಗೆ ಸದರಿ ವಿದ್ಯಾರ್ಥಿ ಯನು ಕರೆದುಕೊಂಡು ಬಂದಿದ್ದು *6* ವರ್ಷ ಕಳೆದ ಕಾರಣ ಈಗ ಹಾಜರು ಇರುವ ಆರೋಪಿಗಳ ಪೈಕಿ ಸಂಜು ಅಲಿಯಾಸ್ ಸ್ಯಾಮ್ಸನ್ ಅವರನ್ನು ಗುರುತಿಸಲು ಆಗುವುದಿಲ್ಲ. ನಿ.ಪಿ.-*89* ರ ದಿನಾಂಕದಂದು ನಾನು ಭೌತಶಾಸ್ತ್ರ ವಿಷಯವನ್ನು ಭೋದನೆ ಮಾಡುತ್ತಿದ್ದೇ.

**ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿಗಳ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-**

. ದಿಃ*28.12.2016* ರಂದು ನಮ್ಮ ಕಾಲೇಜಿನಲ್ಲಿ ಸುಮಾರು *2,000* ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಅದೇ ಕಾರಣ ಎಲ್ಲಾ ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಗುರುತಿಸಲು ಕಷ್ಟ ಇರುತ್ತದೆ. ಪೊಲೀಸರು ನಮ್ಮ ಕಾಲೇಜಿಗೆ ಭೇಟಿ ನೀಡುವ ಮೊದಲು ಸಂಜು ಅಲಿಯಾಸ್ ಸ್ಯಾಮ್ಸನ್ ವಿದ್ಯಾರ್ಥಿಯನ್ನು ನಾನು ಮಾತಾನಾಡುವ ಸಂದರ್ಭ ಇರಲಿಲ್ಲ. ಸಂಜು ಅಲಿಯಾಸ್ ಸ್ಯಾಮ್ಸನ್ ವಿದ್ಯಾರ್ಥಿಯನ್ನು ನಮ್ಮ ಕಾಲೇಜಿಗೆ ಕರೆದುಕೊಂಡು ಬರುವ ಮೊದಲು ನಾನು ನೋಡಿದ ನೆನಪು ಇಲ್ಲ. ಪ್ರತಿಯೊಂದು ವಿಭಾಗಕ್ಕೆ ವಿಭಾಗ ಮುಖ್ಯಸ್ಥರು ಇರುತ್ತಾರೆ ಎಂದರೆ ಸರಿ. ಜೆಒಸಿ ಎಲೆಕ್ಟ್ರಿಕಲ್ ವಿಭಾಗದಲ್ಲಿ ದಿಃ*28.12.2016* ರಂದು ಶ್ರೀ.ಮಂಜುನಾಥ ಪ್ರಸಾದ್ ಅವರು ವಿಭಾಗ ಮುಖ್ಯಸ್ಥರು ಇದ್ದರು. *2003-2004* ರಿಂದ *2016* ರ ತನಕ ಶ್ರೀ.ಮಂಜುನಾಥ ಪ್ರಸಾದ್ ಅವರು ವಿಭಾಗ ಮುಖ್ಯಸ್ಥರು ಇದ್ದರು.

*2003-2004* ನೇ ಸಾಲಿನಲ್ಲಿ ಸುಮಾರು *10-12* ಸಿಬ್ಬಂದಿಗಳು ಇದ್ದರು. ಪ್ರತಿ ವಿದ್ಯಾರ್ಥಿ ಸಂಬಂದ ಪಟ್ಟ ಫಾರಂಗಳನ್ನು ಕಛೇರಿ ಸಿಬ್ಬಂದಿಗೆ ಕೊಡುತ್ತಾರೆ. ಫೋಟೋ ಮೇಲೆ ವಿದ್ಯಾರ್ಥಿ ಸಹಿ ಬರುವುದಿಲ್ಲ ಆದರೆ ಫಾರಂನಲ್ಲಿ ವಿದ್ಯಾರ್ಥಿ ಸಹಿ ಎಂದು ಇರುವ ಸ್ಥಳದಲ್ಲಿ ಸಹಿ ಮಾಡಬೇಕು.

ನಿಗಧಿತ ಸ್ಥಳದಲ್ಲಿ ಫೋಟೋವನ್ನು ಅಂಟಿಸಬೇಕು ಎಂದರೆ ಸರಿ. ಫೋಟೋ ಮೇಲೆ ಕಾಲೇಜಿನ ಸೀಲು ಅಥವಾ ಸಂಬಂದ ಪಟ್ಟ ಅಧಿಕಾರಿಯ ಸಹಿ ಮಾಡುವುದಿಲ್ಲ. ವಿದ್ಯಾರ್ಥಿ ದಾಖಲು ಆದ ನಂತರ ಅಡ್ಮಿಷನ್ ರಿಜಿಸ್ಟರ್ ನಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಅಡ್ಮಿಷನ್ ರಿಜಿಸ್ಟರ್ ನಲ್ಲಿ ವಿದ್ಯಾರ್ಥಿಯ ಫೋಟೊ ಅಂಟಿಸಲಾಗುತ್ತದೆ ಎಂದರೆ ಸರಿ. ಅಡ್ಮಿಷನ್ ರಿಜಿಸ್ಟರ್ ದೃಢಿಕೃತ ನಕಲನ್ನು ತನಿಖಾಧಿಕಾರಿ ಕೇಳಿದ್ದರೆ ಕೊಡುತ್ತಿದ್ದೆ. ಅಡ್ಮಿಷನ್ ರಿಜಿಸ್ಟರ್ ಅನ್ನು ನಿರ್ವಹಿಸಿದ್ದ ಬಗ್ಗೆ ತನಿಖಾಧಿಕಾರಿ ಗಮನಕ್ಕೆ ತಂದಿಲ್ಲ. ನಿ.ಪಿ-*88* ದಾಖಲೆ ದಿನಾಂಕಕ್ಕೆ ಶ್ರೀಮತಿ.ಕೆ.ಎನ್.ರತ್ನ ಅವರು ಪ್ರಾಂಶುಪಾಲರು ಇದ್ದರು. ವಿದ್ಯಾರ್ಥಿ ನೀಡಿದ ಅಪ್ಲಿಕೇಶನ್ ಮೇಲೆ ನಮ್ಮ ಸಿಬ್ಬಂದಿ ಅವರು ಏನು ಬರೆಯುವುದಿಲ್ಲ. ನಿ.ಪಿ-*88* ರಲ್ಲಿ ವಿದ್ಯಾರ್ಥಿ ಫೋಟೋಗೆ ಪಿನ್ ಮಾಡಿದ್ದಾರೆ. ನಿ.ಪಿ-*88* ಫಾರಂ ಅನ್ನು ವಿದ್ಯಾರ್ಥಿ ನನ್ನ ಸಮಕ್ಷಮ ಬರೆದಿಲ್ಲ ಎಂದರೆ ಸರಿ. ತನಿಖಾಧಿಕಾರಿ ಸಲ್ಲಿಸಿದ ಮನವಿ ಪತ್ರವನ್ನು ಹುಡುಕಿ ಸಿಕ್ಕರೆ ಹಾಜರು ಮಾಡುತ್ತೇನೆ. ನಿ.ಪಿ-*88* ರಂತೆ ಅರ್ಜಿ ಫಾರಂ ಅನ್ನು ಸಂಜು ಅಲಿಯಾಸ್ ಸ್ಯಾಮ್ಸನ್ ವಿದ್ಯಾರ್ಥಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ಮನವಿ ಪತ್ರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ:- ಇಲ್ಲ.***

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***